ಸೇಷನ್ ಕೇಸ್ ನಂ.22/2025

ಪಿ.ಡಬ್ಲ್ಯೂಃ 3

ಸಿ.ಡಬ್ಲ್ಯೂಃ 27

**ದಿನಾಂಕಃ 15.10.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

18. ಸಾಕ್ಷಿಗೆ ಕ್ಯಾಮೆರಾ 4 ರಲ್ಲಿ ದಾಖಲಾಗಿರುವ ದೃಶ್ಯಾವಳಿಗಳನ್ನು ಮುಕ್ತ ನ್ಯಾಯಾಲಯದಲ್ಲಿ ಪ್ಲೇ ಮಾಡಿ ತೋರಿಸಿದ್ದು 07.54:22 ಸೆಕೆಂಡಿಗೆ ಒಬ್ಬ ಗ್ರೇ ಬಣ್ಣದ ಶರ್ಟ ಧರಿಸಿ ನನ್ನ ತಮ್ಮನ ಬಿಲ್ಡಿಂಗ್ ಗೆ ಪ್ರವೇಶ ಮಾಡಿದವನು ನೆಲ ಮಹಡಿಯಲ್ಲಿರುವ ಬಾಡಿಗೆದಾರ ಎಂದು ಹೇಳುತ್ತಾರೆ. 07.55:21 ಸೆಕೆಂಡಿಗೆ ಹೊರಗೆ ಬರುತ್ತಿರುವವರಲ್ಲಿ ಹಳದಿ ಬಣ್ಣದ ಟಿ-ಶರ್ಟ ಧರಿಸಿರುವ ವ್ಯಕ್ತಿ ಶೋಭಿತಗೌಡ ಎಂದು ಹಾಗೂ ಹೂಡಿ ಟಿ-ಶರ್ಟ ಧರಿಸಿ ಕೊಡೆ ಹಿಡಿದವನು ಪವನ ಎಂದು ಗುರುತಿಸುತ್ತಾರೆ. 07.55:45 ನಿಮಿಷಕ್ಕೆ ಒಬ್ಬ ಹೆಣ್ಣು ಮಗಳು ಪಕ್ಕದ ಮನೆಯಿಂದ ಕೊಡೆ ಹಿಡಿದು ನನ್ನ ತಮ್ಮನ ಬಿಲ್ಡಿಂಗ್ ಗೆ ಪ್ರವೇಶ ಮಾಡಿದವಳು ನೆಲ ಮಹಡಿಯಲ್ಲಿರುವ ಬಾಡಿಗೆದಾರನ ಹೆಂಡತಿ ಎಂದು ಹೇಳುತ್ತಾರೆ.

19. 07.56:37 ಸೆಕೆಂಡಗಳಿಂದ 07.57:07 ಸೆಕೆಂಡ್ ಗಳ ನಡುವೆ ನನ್ನ ತಮ್ಮನ ಮನೆಯಿಂದ ಗಂಡ-ಹೆಂಡತಿಯರು ಆತನ ಮನೆಯ ಕೆಲಸದಾಕೆ ಹಾಗೂ ಆಕೆಯ ಗಂಡ ಎಂದು ಗುರುತಿಸುತ್ತಾರೆ. 08.16:02 ಸೆಕೆಂಡಿಗೆ ನನ್ನ ತಮ್ಮನ ಮನೆಯ ಮುಂದೆ ಬಿಳಿ ಬಣ್ಣದ ಆಕ್ಟಿವಾ ಹೊಂಡಾ ಗಾಡಿಯಲ್ಲಿ ಬಂದು ಮನೆಯ ಒಳಗೆ ಹೋದವನು ಚಾಸಾಃ 26 ವಿಶಾಲ ಎಂದು ಗುರುತಿಸುತ್ತಾರೆ. 08.17:29 ಸೆಕೆಂಡಿಗೆ ಮನೆಯಿಂದ ಹೊರ ಬರುತ್ತಿರುವವನು ಚಾಸಾಃ 26 ಆತ ಆ ಕಾಲಕ್ಕೆ ಫೋನ್ ನಲ್ಲಿ ಮಾತನಾಡುತ್ತಿದ್ದಾನೆ ಎಂದು ಹೇಳುತ್ತಾರೆ ಹಾಗೂ ಮತ್ತೇ ಆತ ಒಳ ಹೋಗುತ್ತಾನೆ. ನಂತರ 08.19:45 ಸೆಕೆಂಡಿಗೆ ಹೊರ ಬಂದು ತನ್ನ ದ್ವಿಚಕ್ರ ವಾಹನದಲ್ಲಿ ಹೊರಟು ಹೋಗುತ್ತಾನೆ. ಸಾಕ್ಷಿ ಮುಂದುವರೆದು ಹೇಳುತ್ತಾರೆ ಚಾಸಾಃ 26 ರವರು ಎರಡು ಬಾರಿ ಮನೆಯ ಒಳಗೆ ಹೋಗಲು 1 ನೇ ಆರೋಪಿಯ ಬಳಿ ಮನವಿ ಮಾಡಿದರು ಸಹಿತ ಆಕೆ ಆತನನ್ನು ಒಳಗೆ ಬಿಡಿದ ಕಾರಣ ಆತ ಹೊರಟು ಹೋದ ಎಂದು ಹೇಳುತ್ತಾರೆ.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಕಲಾಪದ ಅವಧಿ ಮುಗಿದ ಕಾರಣ ಮುಂದುವರೆದ ಮುಖ್ಯ ವಿಚಾರಣೆಯನ್ನು ಮಧ್ಯಾಹ್ನ ಕಲಾಪದ ಅವಧಿಗೆ ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

**ಮಧ್ಯಾಹ್ನ ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

20. ಸಾಕ್ಷಿಯು ಮತ್ತೇ ದಿಃ 09.10.2024 ಸಮಯ 09.02 ನಿಮಿಷದ ದೃಶ್ಯಾವಳಿಗಳನ್ನು ನೋಡಿ ಆ ಕಾಲಕ್ಕೆ ಬಂದ ಬಿಳಿ ಕಾರ ನನ್ನ ಅಣ್ಣನದು ಎಂದು ಹೇಳಿ ಅದರಲ್ಲಿ ಚಾಸಾಃ 26 ರವರು ಡಾಃ ಕುಲಕರ್ಣಿ ರವರನ್ನು ಕರೆದು ತಂದರು ಎಂದು ಹೇಳುತ್ತಾರೆ. ಕಾರಿನಲ್ಲಿ ಬಂದ ಇಬ್ಬರು ವ್ಯಕ್ತಿಗಳು ನನ್ನ ತಮ್ಮನ ಮನೆಗೆ ಹೋದರು ಎಂದು ಹೇಳುತ್ತಾರೆ. ಅದೇದಿನ ಸಮಯ 09.18:13 ನಿಮಿಷಕ್ಕೆ ನಾನು ನನ್ನ ತಮ್ಮನ ಮನೆಯ ಬಳಿ ರಿನಾಲ್ಟ ಡಸ್ಟರ್ ಕಾರನಲ್ಲಿ ಬಂದೆ ಎಂದು ಹೇಳುತ್ತಾರೆ. ಸಾಕ್ಷಿಯು ಕಾರಿನಿಂದ ಇಳಿದು ಹೋಗುತ್ತಿರುವ ವ್ಯಕ್ತಿಯೇ ನಾನು ಎಂದು ಗುರುತಿಸುತ್ತಾರೆ. ನಂತರ ಕಾರನ್ನು ಪಾರ್ಕ್ ಮಾಡಿ ನನ್ನ ತಮ್ಮನ ಮನೆಗೆ ಬರುತ್ತಿರುವ ವ್ಯಕ್ತಿಯು ನನ್ನ 2 ನೇ ಮಗ ಶರತ ಎಂದು ಗುರುತಿಸುತ್ತಾರೆ. ನಂತರ 09.18:55 ಸೆಕೆಂಡಿಗೆ ಟಾಟಾ ಇಂಡಿಕಾದಲ್ಲಿ ಬಂದ ವ್ಯಕ್ತಿ ನನ್ನ ಮೊದಲನೇ ಮಗ ಶ್ರೇಯಸ ಎಂದು ಗುರುತಿಸುತ್ತಾರೆ.

(ಈ ಹಂತದಲ್ಲಿ ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಈ ಸಾಕ್ಷಿಯ ಮುಂದುವರೆದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿದಂತೆ ಬೆರಳಚ್ಚು ಮಾಡಲಾಗಿ ನಂತರ ಓದಿ ಪರಿಶೀಲಿಸಲಾಯಿತು ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ).

ಓ ಹೇ ಕೇ ಸರಿ ಇದೆ.

(ಗಂಗಾಧರ ಕೆ.ಎನ್.)
2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.